ಅ. ಕುಡಿಯುವ ನೀರಿನ ತೀವ್ರ ಭವಣೆಯನ್ನು ಎದುರಿಸುತ್ತಿರುವ ಬಾದಾಮಿ ಪಟ್ಟಣದ ಕುಡಿಯುವ ನೀರಿನ ಯೋಜನೆಯ ಅಂದಾಜು ವೆಚ್ಚ ರೂ. 30.00 ಲಕ್ಷ ಮತ್ತು ಕೆರೂರು ಪಟ್ಟಣದ ಕುಡಿಯುವ ನೀರಿನ ಯೋಜನೆಯ ಅಂದಾಜು ವೆಚ್ಚ 52.00 ಲಕ್ಷ ಸರ್ಕಾರದ ಮಂಜೂರಾತಿಗಾಗಿ ಬಂದಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ. ಹಾಗಿದ್ದಲ್ಲಿ ಈ ವರ್ಷದ ಆಯವ್ಯಯದಲ್ಲಿ ಈ ಯೋಜನೆಗಳಿಗೆ ನಿಗದಿಪಡಿಸಿದ ಹಣವೆಷ್ಟು?

ಇ. ಈ ಯೋಜನೆಗಳನ್ನು ಪ್ರಾಶಸ್ತ್ಯದ ಮೂಲಕ ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ. ಹೌದು

ಆ. ಮಂಡಳಿಯ 1995-96 ನೇ ಸಾಲಿನ ಆಯವಯ್ಯವನ್ನು ಗಮನದಲ್ಲಿಟ್ಟು ಈ ಯೋಜನೆಗಳಿಗೆ ಹಣವನ್ನು ನಿಗದಿಪಡಿಸಲಾಗುವುದು.

ಇ. ಈ ಯೋಜನೆಗಳನ್ನು ಹಣಕಾಸಿನ ಪರಿಸ್ಥಿತಿಯನ್ನು ಗಮನಿಸಿ ಮೂರು ವರ್ಷಗಳ ಅವಧಿಯಲ್ಲಿ ಮುಗಿಸಲು ಉದ್ದೇಶಿಸಲಾಗಿದೆ.

ವಿಷಯ : ಶಿವಮೊಗ್ಗ ನಗರ ಪಾಲಿಕೆ ಕುರಿತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 731(831)

ಶ್ರೀ ಅಯಸೂರು ಮಂಜುನಾಥ (ಹೊಸನಗರ) : ಮಾನ್ಯ ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಶಿವಮೊಗ್ಗ ನಗರಪಾಲಿಕೆ ಆಸ್ತಿತ್ವದಲ್ಲಿದೆಯೇ?

ಆ. ಇಲ್ಲವೆಂದಲ್ಲಿ ಯಾವ ಪರ್ಯಾಯ ವ್ಯವಸ್ಥೆ ಜಾರಿಯಲ್ಲಿದೆ?

ಇ. ಹೊಸನಗರ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಯಾವ ಯಾವ ಗ್ರಾಮಗಳು ಈ ನಗರ ಪಾಲಿಕೆಯ ವ್ಯಾಪ್ತಿಗೆ ಸೇರಲಿವೆ?

ಈ. ಈ ಗ್ರಾಮಗಳಿಗೆ ನೀರು, ರಸ್ತೆ, ಸಾರಿಗೆ ಮುಂತಾದ ಕನಿಷ್ಟ ಸೌಲಭ್ಯ ನೀಡಬೇಕಾದ ಹೊಣೆಗಾರಿಕೆ ಯಾರಿಗೆ ಸೇರಿದೆ?

ಉ. ಸದರಿ ಗ್ರಾಮಗಳಿಗೆ ನೀರಿನ ಅತೀವ ಬರ (ತೊಂದರೆ) ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಊ. ಹಾಗಿದ್ದಲ್ಲಿ ಸಮಸ್ಯೆ ಬಗೆಹರಿಸಲು ಸರ್ಕಾರ ಕೈಗೊಂಡ ನಿರ್ದಿಷ್ಟ ಕ್ರಮಗಳಾವುವು?

ಶ್ರೀ ವೈಜನಾಥ ಪಾಟೀಲ್(ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ. ಹೌದು.

ಆ. ಮೇಲಿನ 'ಅ'ಗೆ ನೀಡಲಾದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಇ. ಸಂವಿಧಾನದ 74ನೇ ತಿದ್ದುಪಡಿಯನ್ವಯ ರಾಜ್ಯದ ಎಲ್ಲಾ ನಗರಪಾಲಿಕೆ, ನಗರಸಭೆ ಪುರಸಭೆಗಳ ಎಲ್ಲೆಯನ್ನು ಪರಿಷ್ಕರಿಸಲಾಗುತ್ತಿದ್ದು, ಇದು ಅಂತಿಮಗೊಂಡ ನಂತರ, ಈ ಬಗ್ಗೆ ಸ್ಪಷ್ಟ ಸ್ವರೂಪ ಸಿಗಲಿದೆ.

ಈ,ಉ,ಊ. ಹಾಲಿ ನಗರ ಗ್ರಾಮೀಣ ಪ್ರದೇಶಗಳಿಗೆ ಸಾಕಷ್ಟು ನೀರು ಸರಬರಾಜು ಮಾಡುವ ಸಲುವಾಗಿ ಅಗತ್ಯವಿರುವಷ್ಟು ಹಣವನ್ನು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗಳು ಶಿವಮೊಗ್ಗ ಜಿಲ್ಲಾಧಿಕಾರಿಗಳಿಗೆ ನೀಡಿವೆ.

ವಿಷಯ : ಬಾಗೇಪಲ್ಲಿ ತಾಲ್ಲೂಕಿನಲ್ಲಿ ನೀರಿನಲ್ಲಿರುವ ಫ್ಲೋರಾಯಿಡ್ ಮತ್ತು ನೈಟೀಟ್ ಅಂಶ ನಿವಾರಣೆ ಕ್ರಮ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 732(1128)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಕೋಲಾರ ಜಿಲ್ಲೆಯಲ್ಲಿ ಅದರಲ್ಲೂ ಬಾಗೇಪಲ್ಲಿ ತಾಲ್ಲೂಕಿನ ಕುಡಿಯುವ ನೀರಿನಲ್ಲಿ 'ಲವಣ' ಅಂಶಗಳು ಹೆಚ್ಚಾಗಿದ್ದು ಅದರಲ್ಲಿ ಮುಖ್ಯವಾಗಿ ಫ್ಲೋರೈಡ್ ಮತ್ತು ನೈಟ್ರೇಟ್‌ನ ಅಂಶಗಳು ಹೆಚ್ಚಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಹಾಗಿದ್ದಲ್ಲಿ ಇದರ ನಿವಾರಣೆಗೆ ಕ್ರಮ ಕೈಗೊಳ್ಳಲಾಗಿದೆಯೇ?

ಇ. ಭೂ ವಿಜ್ಞಾನ ಇಲಾಖೆಯು ಈ ಬಗ್ಗೆ ಪರಿವೀಕ್ಷಣೆ ನಡೆಸಿದೆಯೇ? ಹಾಗಿದ್ದಲ್ಲಿ ಆ ವರದಿಯ ವಿವರಗಳನ್ನು ನೀಡುವುದು.

ಶ್ರೀ ಎಸ್.ಡಿ.ಜಯರಾಂ (ಗಣಿ ಮತ್ತು ಭೂ ವಿಜ್ಞಾನ ಸಚಿವರು):

ಅ. ಹೌದು.

ಆ. ಇದರ ಬಗ್ಗೆ ಸಾರ್ವಜನಿಕ ಆರೋಗ್ಯ ಇಲಾಖೆಯಿಂದ ಕ್ರಮ ಕೈಗೊಳ್ಳ ಬೇಕಾಗಿದೆ.

ಇ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು 1984 ರಿಂದ 1994ರ ವರೆವಿಗೆ ಕೋಲಾರ ಜಿಲ್ಲೆಯಲ್ಲಿನ ವಿವಿಧ ಸ್ಥಳಗಳಲ್ಲಿನ ಸುಮಾರು 825 ನೀರಿನ ಮಾದರಿಗಳ ರಸಾಯನಿಕ ವಿಶ್ಲೇಷಣೆ ಮಾಡಲಾಗಿದ್ದು, ಅದರನ್ವಯ ಫ್ಲೋರೈಡ್, ನೈಟ್ರೇಟ್ ಮತ್ತು ನೀರಿನ ಗಡಸುತನದ ಬಗ್ಗೆ ವಿವರಗಳನ್ನು ಇದರೊಡನೆ ಲಗತ್ತಿಸಿರುವ ಅನುಬಂಧ-1 ರಲ್ಲಿ ನೀಡಲಾಗಿದೆ. ಇದಲ್ಲದೆ 1993-94 ಮತ್ತು 1994-95ನೇ ಸಾಲಿನಲ್ಲಿ ಕೋಲಾರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಬಾವಿಗಳಿಂದ ಹಾಗೂ ಇಲಾಖಾವತಿಯಿಂದ ಕೊರೆಯಲಾದ ನಿರೀಕ್ಷಣಾ ಬಾವಿಗಳಿಗಂದ ಒಟ್ಟು 106 ನೀರಿನ ಮಾದರಿಗಳನ್ನು ಸಂಗ್ರಹಿಸಿ ಫ್ಲೋರೈಡ್ ಅಂಶಕ್ಕೆ ವಿಶ್ಲೇಷಿಸಲಾಗಿ 42 ನೀರಿನ ಮಾದರಿಗಳಲ್ಲಿ 1.50 ರಿಂದ 6 ಪಿಪಿಎಂ (ಪಾರ್ಟ್ಸ್ ಪರ್ ಮಿಲಿಯನ್) ವರೆವಿಗೆ ಫ್ಲೋರೈಡ್ ಅಂಶ ಇರುವುದು ಕಂಡು ಬಂದಿದೆ. ಮಿಕ್ಕ 64 ಮಾದರಿಗಳಲ್ಲಿ 1ರಿಂದ 1.5 ಪಿಪಿಎಂ ವರೆವಿಗೆ ಫ್ಲೋರೈಡ್ ಅಂಶ ಇರುವುದು ಕಂಡು ಬಂದಿದೆ. ವಿವರಗಳನ್ನು ಅನುಬಂಧ 2 ರಲ್ಲಿ ನೀಡಲಾಗಿದೆ.